ಕಥನವಾಗಿ, ತಾನು ಕಟ್ಟ ಹೊರಟ ತಳವರ್ಗದ ಮೂಲಮೀಮಾಂಸೆಯ ಪರಿಕರವಾಗಿ ಬಳಸುವ ಸಾಧ್ಯತೆಯನ್ನು ಅವರು ಕಂಡುಕೊಂಡಿದ್ದಕ್ಕೆ ಇಲ್ಲಿನ ಅನೇಕ ಲೇಖನಗಳು ಉದಾಹರಣೆಯಾಗಿ ನಿಲ್ಲುತ್ತವೆ. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು, ರೈತರ ಸವಾಲುಗಳನ್ನು, ಜನಪ್ರಿಯ ಸಿನಿಮಾಗಳನ್ನು, ಈ ಎಲ್ಲವನ್ನೂ ಇಲ್ಲಿ ಡಿ.ಆರ್. ಸಮಕಾಲೀನ ಭಾರತದ ಮತ್ತು ಅದರ ಹಿಂದಿನ ಸಾಮಾಜಿಕ ಸಾಂಸ್ಕೃತಿಕ ರಾಜಕಾರಣದ ಸತ್ಯಗಳನ್ನು ಕಾಣಿಸುವ ವೇದಿಕೆಯಾಗಿ ಬಳಸಿಕೊಂಡರು.

ಅಲ್ಪಸಂಖ್ಯಾತ ಪಟ್ಟಭದ್ರರು ಕಟ್ಟಿದ 'ಏಕ ಶ್ರೇಷ್ಠ' ಮಾದರಿಯ ಬದಲು 'ಬಲು ಶ್ರೇಷ್ಠ'ಗಳ ಬಹುತ್ವದ ಭಾರತದ ಕಲ್ಪನೆಯನ್ನು ಸಾಧಾರವಾಗಿ ನಿರೂಪಿಸುವ ಆಕಾಂಕ್ಷೆ ಅವರಲ್ಲಿ ಮೂಡಿದ್ದು ಈ ಘಟ್ಟದಲ್ಲಿ. ಇದು ಅವರ ಆಕಾಂಕ್ಷೆ ಮಾತ್ರವಾಗಿರಲೇ ಇಲ್ಲ. ಬಹುಸಂಖ್ಯಾತ ದಮನಿತ ಭಾರತೀಯರು ಎಂದಿನಿಂದಲೂ ಹುಡುಕುತ್ತಿದ್ದ ಒಂದು ಪರಿಹಾರವೇ ಆಗಿತ್ತು. ಏಕ ಘನಾಕೃತಿಯ ಎದುರು ಬಹು ಬಣ್ಣಗಳ, ಬಹು ಆಯಮಗಳ, ವೈವಿಧ್ಯಮಯವಾದ, ತನ್ನ ಶಕ್ತಿ ಮತ್ತು ಸೌಂದರ್ಯದಲ್ಲಿ ಯಾವುದಕ್ಕೂ ಕಡಿಮೆಯಿರದ, ಈ ತನಕ ನೇಪಥ್ಯಕ್ಕೆ ಸಂದಿದ್ದ ಭಾರತವನ್ನು 'ಕಾಣಿಸುವ' ಮತ್ತು ಅದನ್ನು ಮುನ್ನೆಲೆಗೆ ತರುವ ಐತಿಹಾಸಿಕ ಪ್ರಯತ್ನವಾಗಿತ್ತು ಅದು. ಈ ತನಕ ಈ ಪ್ರಯತ್ನಗಳು ನಡೆದಿರಲಿಲ್ಲ ಎಂದಲ್ಲ, ಖಂಡಿತವಾಗಿಯೂ ಬಲು ಗಂಭೀರವಾದ, ಪ್ರಾಮಾಣಿಕವಾದ ಪ್ರಯತ್ನಗಳು ನಡೆದಿದ್ದವು. ಆದರೆ, ಡಿ.ಆರ್. ಆ ಪ್ರಯತ್ನಗಳಲ್ಲಿ ಕಡಿಮೆಯಾಗಿದ್ದ ಅಂಶಗಳನ್ನು ತುಂಬಿ ಅದನ್ನು ಸುಪುಷ್ಟಗೊಳಿಸಿದರು. ಅವುಗಳ ಸಾಂಸ್ಕೃತಿಕ ಮತ್ತು ಸೌಂದರ್ಯಾತ್ಮಕ ನೆಲೆಗಳನ್ನು ಘನವಾಗಿ ರೂಪಿಸಿದರು. ಇಷ್ಟೇ ಮುಖ್ಯವಾಗಿ ಅವರು ಮಾಡಿದ್ದೆಂದರೆ ಆ ದಮನಿತ ನೆಲೆಗಳಲ್ಲಿ ಉದ್ದಕ್ಕೂ ಕಾಣಬಹುದಾಗಿದ್ದ ಪ್ರತಿರೋಧದ ಅಂಶಗಳನ್ನೂ, ಅವು ನಿರಂತರವಾಗಿ ಸ್ವಾಯತ್ತತೆಗಾಗಿ ನಡೆಸಿದ ಹೋರಾಟವನ್ನೂ ಮನಗಾಣಿಸಿದ್ದು. ಸಿದ್ಧಲಿಂಗಯ್ಯನವರು 'ದಲಿತರು ಬಂದರು ದಾರಿ ಬಿಡಿ' ಎಂದರೆ ಇವರು ಆ ದಾರಿಯನ್ನು ಹೆದ್ದಾರಿ ಎಂದು ತೋರಿಸಿದರು. ಪ್ರಶ್ನಿಸಲಾಗದ ಆಧಾರಗಳನ್ನು ಸಮಾಜಶಾಸ್ತ್ರೀಯ ಆಧಾರದಲ್ಲಿ ಬಲಗೊಳಿಸಿದರು. ಯಾವುದನ್ನು ಉಪಸಂಸ್ಕೃತಿಯೆಂದು, ಅನಾಗರಿಕತೆಯೆಂದು ಪಕ್ಕಕ್ಕೆ ತಳ್ಳಲಾಗಿತ್ತೋ ಅದನ್ನು 'ಮೂಲಸಂಸ್ಕೃತಿ' ಎಂದು ಪ್ರತಿಷ್ಠಾಪಿಸುವ ಕ್ರಿಯಾ ಯೋಜನೆಯನ್ನೇ ಇವರು ತಮ್ಮ ಕೊನೆಗಾಲದ ಬರಹಗಳ ಮೂಲಕ ಮಾಡಿದರು.

ಈ ಹಿನ್ನೆಲೆಯಲ್ಲಿಯೇ ಇವರು ಅಂಬೇಡ್ಕರ್ ಅವರ ಉತ್ತರಾಧಿಕಾರಿ ಎನ್ನಿಸುವುದು. ಅಂಬೇಡ್ಕರ್‌ವಾದವನ್ನು ಮುಂದುವರೆಸುವ ಇವರ ತಾತ್ವಿಕತೆಯನ್ನು ಇಡೀ ಭಾರತ ಗಂಭೀರವಾಗಿ ನೋಡಬೇಕಾಗಿರುವುದು ಈ ಕಾರಣಕ್ಕಾಗಿ ಅನ್ನಿಸುತ್ತದೆ. ಯು.ಆರ್. ಅನಂತಮೂರ್ತಿಯವರು ಇವರನ್ನು 'ಮೂರನೇ ಜಗತ್ತಿನ ದಾರ್ಶನಿಕ' ಎಂದು ಕರೆದದ್ದು ಉತ್ಪ್ರೇಕ್ಷೆಯಲ್ಲ, ಕೇವಲ ಅಭಿಮಾನವಲ್ಲ. ಅದು ಪರಮ ಸತ್ಯ. ಇಲ್ಲೇ ನಾವು ಗಮನಿಸಬೇಕಾದ ಮಹತ್ವದ ಮತ್ತೊಂದು ಅಂಶವೆಂದರೆ, ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಸಂಯೊಜಿಸಿದ ಅವರ ಕೃತಿ 'ಉರಿ ಚಮ್ಮಾಳಿಗೆ'. ಇದನ್ನಂತೂ ಸಮಕಾಲೀನ ಭಾರತಕ್ಕೆ ಅಗತ್ಯವಾಗಿ ಬೇಕಾಗಿರುವ 'ಮೂಲಪಠ್ಯ' ಎನ್ನುವುದರಲ್ಲಿ ಯಾರಿಗೂ ಅನುಮಾನಗಳಿರಲು ಸಾಧ್ಯವಿಲ್ಲ. ಈ ಇಬ್ಬರನ್ನೂ ಬೆಸೆದರೆ ಮಾತ್ರ ಭಾರತದ ಕಾಯಿಲೆಗಳಿಗೆ ಮದ್ದಾಗಬಲ್ಲ ತಾತ್ವಿಕ ಆಕೃತಿಯೊಂದು ಸಿದ್ಧಗೊಳ್ಳಬಲ್ಲದು ಎನ್ನುವ ಅವರ ನಂಬಿಕೆ ಈಗಲೂ ಅನೇಕರ ನಂಬಿಕೆಯಾಗಿದೆ.

ನಟರಾಜ್ ಹುಳಿಯಾರ್, ಮನು ಚಕ್ರವರ್ತಿ, ಎಂ. ಉಷಾ ಮೊದಲಾದವರ ಲೇಖನಗಳು ಈ ಕೃತಿಯ ಮಹತ್ವವನ್ನು ಹೆಚ್ಚಿಸಿವೆ. ಈ ನಮ್ಮ ದುರಿತ ಕಾಲದಲ್ಲಿ ಬಂದ ಈ ಕೃತಿ ಇತ್ತೀಚಿನ ದಿನಗಳ ಮಹತ್ವದ ಸಾಂಸ್ಕೃತಿಕ ಪಠ್ಯ. ಶಿವರಾಜ ಬ್ಯಾಡರಹಳ್ಳಿಯವರಿಗೆ ಧನ್ಯವಾದಗಳು ಸಲ್ಲಬೇಕು.